**ಪಿಡಬ್ಲೂ: 1** **ಅಸಲು ದಾವೆ ನಂ.635/2023**

**ದಿನಾಂಕ 02-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ-**

1. ನನ್ನ ತಂಗಿಗೆ & ನನ್ನ ಮಗನಿಗೆ ಹೊಲ ಕೊಟ್ಟಾಗ ನಾನು ಸರ್ವೆ ನಕಾಶೆ ಮಾಡಿಸಿರಲಿಲ್ಲ. ಆ ಕಾಲಕ್ಕೆ ಹದ್ದುಬಸ್ತು ಮಾಡಿಸಿರುತ್ತೀರಾ ಎಂದರೆ ಸಾಕ್ಷಿಯು ಒತ್ತುವರಿ ಮಾಡಿದ ನಂತರ ಹದ್ದುಬಸ್ತು ಮಾಡಿದ್ದೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಎಷ್ಟು ಹೊಲವನ್ನು ಹದ್ದುಬಸ್ತು ಮಾಡಿಸಿರುತ್ತೀರಿ ಎಂದರೆ ಸಾಕ್ಷಿಯು ನನ್ನದು ಹೊಲ ಎಷ್ಟಿದೆ ಅಷ್ಟೂ ಹದ್ದುಬಸ್ತು ಮಾಡಿಸಿರುತ್ತೇನೆ ಎನ್ನುತ್ತಾರೆ. ನಿಮ್ಮ ಆಸ್ತಿಯನ್ನು ಹದ್ದುಬಸ್ತು ಮಾಡುವಾಗ ಪ್ರತಿವಾದಿಯ ಆಸ್ತಿಯನ್ನು ಅಳತೆ ಮಾಡಿಸಿದ್ದೀರಾ ಎಂದರೆ ಸಾಕ್ಷಿಯು ಸರ್ವೆ ನಂ.22 ನ್ನು ಪೂರ್ತಿಯಾಗಿ ಹದ್ದುಬಸ್ತು ಮಾಡಿದ್ದರು ಎನ್ನುತ್ತಾರೆ. ಎಲ್ಲಾ ಹದ್ದುಬಸ್ತು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ.

2. ನಿಮ್ಮ ಆಸ್ತಿಯ ಪಶ್ಚಿಮಕ್ಕೆ ಪ್ರತಿವಾದಿಯ ಆಸ್ತಿ ಇದೆ ಎಂದರೆ ಸರಿ. ಸರ್ವೆ ನಂ.22 ರ ಗಡಿ ಕಲ್ಲು ಯಾವ ದಿಕ್ಕಿನಲ್ಲಿತ್ತು ಎಂದರೆ ಸಾಕ್ಷಿಯು ದಕ್ಷಿಣದಿಂದ ಉತ್ತರಕ್ಕೆ ಹೋಗಿದೆ ಎನ್ನುತ್ತಾರೆ. ದಕ್ಷಿಣಕ್ಕೆ ಬಾಂಡುಗಲ್ಲು ಇದೆಯಾ ಎಂದರೆ ಸಾಕ್ಷಿಯು ಇತ್ತು, ಅದನ್ನು ಕಿತ್ತು ಬೇರೆ ಕಡೆಗೆ ಹಾಕಿರುತ್ತಾರೆ ಎನ್ನುತ್ತಾರೆ. ಸದರಿ ಕಲ್ಲು ಯಾವ ಸರ್ವೆ ನಂಬರ್‌ಗೆ ಹೊಂದಿಕೊಂಡಿದೆ ಎಂದು ನನಗೆ ಗೊತ್ತಿಲ್ಲ. ಕಲ್ಲು ಕಿತ್ತು ಹಾಕಿದ್ದರ ಬಗ್ಗೆ ಫೋಟೋ ತೆಗೆದಿಲ್ಲ & ದೂರು ಕೊಟ್ಟಿಲ್ಲ.

3. ನಿಮ್ಮ ಹೊಲಕ್ಕೆ ಬರುವ ರಸ್ತೆ ಸಿದ್ರಾಂಪುರದಿಂದ ದಕ್ಷಿಣದಿಂದ ಉತ್ತರಕ್ಕೆ ಬರುವ ರಸ್ತೆ ಇದೆ ಎಂದರೆ ಸಾಕ್ಷಿಯು ದಕ್ಷಿಣದಿಂದ ಪೂರ್ವಕ್ಕೆ ಹೋಗುತ್ತದೆ ಎನ್ನುತ್ತಾರೆ. ಸರ್ವೆಯ ಕಾಲಕ್ಕೆ ಸುತ್ತಮುತ್ತಲಿನ ಹೊಲದವರಿಗೆ ನೋಟೀಸು ಕೊಟ್ಟಿದ್ದರು. ಬಸವರಾಜ್, ಅಮರೇಶ್, ಮಲ್ಲನಗೌಡ, ಮಾವಿನಮಡು ಶೇಖರಪ್ಪ, ವೆಂಕಟೇಶ್‌ನ ಮಗನ ಹೆಂಡತಿಗೆ, ಪಂಪಣ್ಣ, ಯಂಕಪ್ಪ, ರಾಜೇಶ್ವರಿ ಗಂಡ ರವರಿಗೆಲ್ಲಾ ನೋಟೀಸು ಕೊಟ್ಟಿದ್ದರು. ಸದರಿ ನೋಟೀಸಿನ ಪ್ರತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಸದರಿಯವರ ಸರ್ವೆ ನಂಬರ್‌ಗಳು ಯಾವುವು ಎಂದು ನನಗೆ ನೆನಪಿಲ್ಲ, ಅವರು ಯಾವ ದಿಕ್ಕಿಗೆ ಬರುತ್ತಾರೆ ಎಂದು ಹೇಳಬಲ್ಲೆ.

4. 2023 ರಲ್ಲಿ ಹದ್ದುಬಸ್ತು ಮಾಡಲು ಕೊಟ್ಟಿದ್ದೆನು. ಆ ಕಾಲಕ್ಕೆ ನಮ್ಮ ಕುಟುಂಬದಲ್ಲಿ ಹಿಸ್ಸೆಗಳು ಆಗಿದ್ದವು. ನೀವು ಬೇರೆ ಆಗುವುದಕ್ಕಿಂತ ಮುಂಚೆ ನಿಮ್ಮ & ಪ್ರತಿವಾದಿಯ ಆಸ್ತಿ ಒಂದೇ ಸರ್ವೆ ನಂಬರ್‌ನಲ್ಲಿ ಬರುತ್ತಿತ್ತು ಎಂದರೆ ಸಾಕ್ಷಿಯು ಅವರು ನಮ್ಮ ಅಣ್ಣತಮ್ಮಂದಿರೇ ಅಲ್ಲ, ಹೀಗಿದ್ದಾಗ ಒಂದೇ ಸರ್ವೆ ನಂಬರ್‌ನಲ್ಲಿ ಹೇಗೆ ಬರುತ್ತದೆ ಎನ್ನುತ್ತಾರೆ. ನನ್ನ ತಂದೆಯ ತಾಯಿಯ ಆಸ್ತಿ

13 ಎಕರೆ ಚಿಲ್ಲರೆ ಇತ್ತು. 1955 ರಲ್ಲಿ ಒಟ್ಟು ಆಸ್ತಿ ಎಷ್ಟಿತ್ತು ಎಂದು ನಾನು ದಾಖಲೆ ನೋಡಿಲ್ಲ. ಒತ್ತುವರಿ ಆದ ನಂತರದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ.

5. ಪ್ರತಿವಾದಿ ಹೊಲದ ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ಸರಿ. ಪ್ರತಿವಾದಿ ಹೊಲದ ದಕ್ಷಿಣಕ್ಕೆ ನಾಲೆ ಇದೆ ಎಂದರೆ ಸಾಕ್ಷಿಯು ಮೊದಲು ಇರಲಿಲ್ಲ, ಈಗ ಇದೆ ಎನ್ನುತ್ತಾರೆ. ಪ್ರತಿವಾದಿಯ ಆಸ್ತಿಯಲ್ಲಿ ಕೆರೆ ಇದೆ ಎಂದರೆ ಸರಿ.

6. ನೀವು ಹದ್ದುಬಸ್ತು ಮಾಡುವಾಗ ನಾಲೆಯನ್ನು ಹಿಡಿದು ಮಾಡಿದ್ದರಾ, ಅಥವಾ ಬಿಟ್ಟು ಮಾಡಿದ್ದರಾ ಎಂದರೆ ಸಾಕ್ಷಿಯು ಆತನ ಬದುವು ಎಲ್ಲಿಂದ ಇತ್ತೋ ಅಲ್ಲಿಂದ ಮಾಡಿರುತ್ತಾರೆ ಎನ್ನುತ್ತಾರೆ. ಆ ನಾಲಾವನ್ನು ಸೇರ್ಪಡೆ ಮಾಡಿ ಅಳತೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಮೊದಲು ಆ ನಾಲಾ ಇರಲಿಲ್ಲ, ನಂತರದಲ್ಲಿ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ.

7. ನಮ್ಮ ಮತ್ತು ಪ್ರತಿವಾದಿಯ ಆಸ್ತಿಗಳಿಗೆ ನೀರು ಕೆನಾಲ್ ನಂ.32 ರಿಂದ ಬರುತ್ತದೆ. ಆ ಕೆನಾಲ್ ನಮ್ಮ ಹೊಲದಲ್ಲಿ ಹೋಗಿಲ್ಲ. ಹದ್ದುಬಸ್ತು ಕೊಟ್ಟಂತಹ ಆಸ್ತಿಗಳು ಒಟ್ಟು ಆಸ್ತಿಯ ನಕಾಶೆ ನಿಪಿ-2 & 3 ಅಲ್ಲ ಎಂದರೆ ಸರಿಯಲ್ಲ.

8. ಸರ್ವೆ ನಂ.22 ರಲ್ಲಿ ನನ್ನ, ನನ್ನ ಹೆಂಡತಿ & ಮಗನ ಹೆಸರಿನಲ್ಲಿ ಹಿಸ್ಸೆ ಇದೆ. ನಿಮ್ಮ ಒಟ್ಟು ಆಸ್ತಿಯ ಹದ್ದುಬಸ್ತು ನಕಾಶೆ ನಿಪಿ-2 ಅಲ್ಲ ಎಂದರೆ ಸಾಕ್ಷಿಯು ನಾನು ಕೊಟ್ಟಿರುವುದು ಅದೇ ಎನ್ನುತ್ತಾರೆ.

9. ನನ್ನ ಜಮೀನಿನಲ್ಲಿ ಕರಾಬು 13 ಗುಂಟೆ ಇದೆ. ಸದರಿ ಕರಾಬನ್ನು ಸೇರಿಸಿ ಅಳತೆ ಮಾಡಿದ್ದರೋ ಅಥವಾ ಹಿಡಿದು ಅಳತೆ ಮಾಡಿದ್ದರಾ ಎಂದರೆ ಸಾಕ್ಷಿಯು ಪೋರ್ಟ್ ಕರಾಬು ಸೇರಿ ಅಳತೆ ಮಾಡಿದ್ದರು ನಂತರದಲ್ಲಿ ಅದನ್ನು ತೆಗೆದಿದ್ದರು ಎನ್ನುತ್ತಾರೆ. ಸದರಿ ವಿಷಯವನ್ನು ಹದ್ದುಬಸ್ತು ಪಂಚನಾಮೆಯಲ್ಲಿ ಬರೆದಿದ್ದರಾ ಎಂದರೆ ಸಾಕ್ಷಿಯು ಅದರಲ್ಲಿ ಬರೆದಿರುತ್ತಾರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಏಕೆಂದರೆ ನಾನು 2 ನೇ ತರಗತಿ ಮಾತ್ರ ಓದಿರುತ್ತೇನೆ ಎನ್ನುತ್ತಾರೆ.

10. ನಿಪಿ-2 ನ್ನು ಪಡೆಯಲು ನಾನೇ ಅರ್ಜಿ ಕೊಟ್ಟಿದ್ದೆ.

11. ಬಸವರಾಜ್ ಗೌಡ ತಂದೆ ಬಸನಗೌಡ ರವರು ನಮ್ಮ ಸಂಬಂಧಿಕರಲ್ಲ. ಸದರಿಯವರು ಜಮೀನು ಸರ್ವೆ ನಂ.18 ರಲ್ಲಿ ಬರುತ್ತದೆ. ಅಮರೇಶ್ ತಂದೆ ಕರಿಯಪ್ಪ ಅಳ್ಳಿ, ದುರ್ಗಪ್ಪ ತಂದೆ ಸಣ್ಣ ಈರಪ್ಪರವರ ಆಸ್ತಿಗಳು ಸಿದ್ರಾಮಪುರ ಏರಿಯಾದಲ್ಲಿ ಬರುವುದಿಲ್ಲ, ಕೊಂತನೂರು ಏರಿಯಾದಲ್ಲಿ ಬರುತ್ತದೆ ಎನ್ನುತ್ತಾರೆ.

12. ನಿಮ್ಮ ಆಸ್ತಿಯಲ್ಲಿಯೇ ಸಹ ನಿಮ್ಮ ಮಗನ ಮಾರಾಟಗಾರರ ಆಸ್ತಿಯನ್ನು ಹಿಸ್ಸೆ ಮಾಡಿರುತ್ತಾರೆ ಎಂದರೆ ಸರಿ. ನಿಪಿ-1 ರಲ್ಲಿರುವ ಚೆಕ್ ಬಂದಿಯಲ್ಲಿ ನಿಮ್ಮ ಮಗ ಆಸ್ತಿಯನ್ನು ಖರೀದಿ ಮಾಡಿದ್ದಾರೆ & ಕಬ್ಜೆಯಲ್ಲಿದ್ದಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

14. ಪ್ರತಿವಾದಿಗಳು ನಿಮ್ಮ ಆಸ್ತಿಯನ್ನು ಎಂದಿಗೂ ಒತ್ತುವರಿ ಮಾಡಿಲ್ಲ, ನೀವು ಯಾವುದೇ ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಸರ್ವೆ ಮಾಡಿಸಲು ಅರ್ಜಿ ಸಲ್ಲಿಸಿಲ್ಲ, ಸರ್ವೆ ಆಗಿಲ್ಲ, ದಾಖಲೆಗಳನ್ನು ನೀವು ನಿಮ್ಮ ಅನುಕೂಲಕ್ಕಾಗಿ ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯವಿಚಾರಣೆಯ ಪ್ರ.ಪತ್ರದಲ್ಲಿ ಬರೆದಿರುವುದು ಸುಳ್ಳು ಎಂದರೆ ಸರಿಯಲ್ಲ.

15. ಪ್ರತಿವಾದಿ ತನ್ನ ತಕರಾರಿನಲ್ಲಿ ಬರೆದಿರುವ ಅಂಶಗಳ ಬಗ್ಗೆ ನಿಮಗೆ ಗೊತ್ತೇ ಎಂದರೆ ಸಾಕ್ಷಿಯು ನೀವು ಓದಿ ಹೇಳಿದರೆ ನನಗೆ ತಿಳಿಯುತ್ತದೆ ಎನ್ನುತ್ತಾರೆ. ಈ ವಿಚಾರವಾಗಿ ನಿಮ್ಮ ವಕೀಲರನ್ನು ಎಂದಾದರೂ ಕೇಳಿದ್ದೀರಾ ಎಂದರೆ ಸಾಕ್ಷಿಯು ನೀವು ಹೇಳಿದರೆ ನಾನು ಕೇಳುತ್ತೇನೆ ಎನ್ನುತ್ತಾರೆ. ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸಿದ ನಂತರ ನಾನು ನನ್ನ ವಕೀಲರನ್ನು ಭೇಟಿಯಾಗಿದ್ದೆ. ಪ್ರತಿವಾದಿ ತಕರಾರು ಸಲ್ಲಿಸಿದ್ದ ಬಗ್ಗೆ ನಿಮಗೆ ಮಾಹಿತಿ ಇದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**